# ಮುಯ್ಯಾಳು ಪದ್ಧತಿ

ಗ್ರಾಮೀಣ ಪ್ರದೇಶಗಳಲ್ಲೀಗ ಅಡಕೆಯನ್ನು ಕೊಯ್ಯುವ ಕಾಲ. ಅಡಕೆ ಸುಲಿಯಲು ಕೂಲಿಯವರು ಸಿಗುವುದಿಲ್ಲ. ಹಾಗಾಗಿ ಹಿಂದೆ ಇದ್ದ ಮುಯ್ಯಾಳು ಪದ್ಧತಿಯನ್ನು ಇಂದು ಅನುಸರಿಸುತ್ತಿದ್ದಾರೆ. ಹಳ್ಳಿಯವರೆಲ್ಲಾ ಒಂದೆಡೆ ಸೇರಿ ಮಾತಾಡಿಕೊಂಡು ಒಂದೊಂದು ದಿನ ಒಬ್ಬೊಬ್ಬರ ಮನೆಗೆ ಹೋಗಿ ಅಡಕೆ ಸುಲಿಯುತ್ತಾರೆ. ಹಾಡು, ಕತೆ, ಹರಟೆಯೊಂದಿಗೆ ಕೆಲಸ ಮಾಡುತ್ತಾರೆ. ಈ ಪದ್ಧತಿ ಎಲ್ಲಾ ರೀತಿಯಿಂದಲೂ ಅನುಕೂಲವಾಗಿದೆ.

■ ಶಶಿರೇಖಾ ನಾಗೇಂದ್ರ, ತುಮಕೂರು





# ಹಿಮಾಲಯ ಶಿಖರ ದರ್ಶನ

ನೇಪಾಳ ಪ್ರವಾಸಕ್ಕೆ ಹೋದಾಗ 'ಮೌಂಟೇನ್ ಫ್ಲೈ' ಕೈಗೊಂಡರೆ ಅವಿಸ್ಮರಣೀಯ ಅನುಭವ ನೀಡುವ ಅದ್ಭುತ ಪ್ರವಾಸ ನಿಮ್ಮದಾಗುತ್ತದೆ. ಅಲ್ಲಿಯ ಖಾಸಗಿ ವಿಮಾನ ಸಂಸ್ಥೆಗಳು ಈ 'ಮೌಂಟನ್ ಫ್ಲೈ' ಪ್ಯಾಕೇಜ್ ಪ್ರವಾಸಿಗರಿಗೆ ನೀಡುತ್ತವೆ. ನೇಪಾಳದ ಏರ್‌ಪೋರ್ಟ್‌ನಲ್ಲಿ 'ಮೌಂಟೇನ್ ಫ್ಲೈ' ಟಿಕೆಟ್ ಖರೀದಿಸಿ ಒಳ ಹೋದರೆ ಸರಿಯಾದ ವೇಳೆಯಲ್ಲಿ ಬೆಳಗಿನ ಏಳು ಗಂಟೆಯಲ್ಲಿ ಇಪ್ಪತ್ತು ಜನ ಕೂರಬಹುದಾದ ಪುಟ್ಟ ಕಾಪ್ಟರ್ ವಿಮಾನದಲ್ಲಿ ಈ ಪ್ರವಾಸ ನಿಗದಿಯಾಗಿರುತ್ತದೆ. ಹಿಮಾಲಯ ಪರ್ವತದ ಅತಿ ಸುಂದರ ಕಾಂಚನ ಜುಂಗಾ, ಗೌರಿ ಶಂಕರ, ಮೌಂಟ್ ಎವರೆಸ್ಟ್ ಮುಂತಾದ ಸುಮಾರು ಇಪ್ಪತ್ತೆರಡಕ್ಕೂ ಹೆಚ್ಚು ಶಿಖರದ ದರ್ಶನ ಮಾಡಿಸುತ್ತಾರೆ. ಹತ್ತಿರದಿಂದ ಕಾಣುವ ಧವಳಗಿರಿಯ ಅಂದವನ್ನು ವರ್ಣಿಸಲು ಮಾತೇಬಾರದು. ಎಳೆ ಬಿಸಿಲಿನಲ್ಲಿ ಮಿರಿ ಮಿರಿ ಮಿಂಚುವ ಆ ಸುಂದರವಾದ ಮೋಹಕ ದೃಶ್ಯ ಅವಿಸ್ಮರಣೀಯ. ಹಿಮಾಲಯದ ಒಂದು ಸುತ್ತನ್ನು ನಲ್ವತ್ತೈದು ನಿಮಿಷದಲ್ಲಿ ತೋರಿಸುವ ಈ ಹಾರಾಟಕ್ಕೆ ಕೊಡಬೇಕಾದ ಹಣ ಏಳು ಸಾವಿರ ರೂಪಾಯಿ!

■ ಜಯಾ ಯಾಜಿ, ಶಿರಾಲಿ

# ಹೋಟೆಲ್‌ನಲ್ಲೂ ಸ್ಲೇಟು-ಬಳಪ

ಮಧುಗಿರಿ ಪಟ್ಟಣದಲ್ಲಿ ಕೆಲವು ದಶಕಗಳಿಂದ ರುಚಿಕಟ್ಟಾದ ತಿಂಡಿಗೆ ಹೆಸರಾದ ಹೋಟೆಲ್ 'ಗುರು ಸನ್ನಿಧಿ' ಎಂಬ ಸ್ವಸಹಾಯ ಪದ್ಧತಿಯ ಚಿಕ್ಕದಾದ ಹೋಟೆಲ್ ಇದೆ. ಕ್ಯಾಷ್ ಟೇಬಲ್ ಪಕ್ಕದಲ್ಲಿ ತಿಂಡಿ ಕೌಂಟರ್ ಇರುವ ಕಾರಣ ಟೋಕನ್ನಿನ ಅಗತ್ಯವಿಲ್ಲದೆ ಗುಂಪಿನಲ್ಲಿ ಬರುವ ಗ್ರಾಹಕರು ಒಬ್ಬೊಬ್ಬರಾಗಿ ತಮಗಿಷ್ಟವಾದ ತಿನಿಸನ್ನು ಕೇಳಿ ಪಡೆಯಬಹುದಾಗಿದೆ. ಪಕ್ಕದಲ್ಲಿ ಇರುವ ಕ್ಯಾಷಿಯರ್ ಪ್ರತಿ ಸದಸ್ಯರ ತಿನಿಸಿನ ವಿವರ ಹಾಗೂ ದರವನ್ನು ಸ್ಲೇಟಿನಲ್ಲಿ ಬರೆದು ದರಪಟ್ಟಿ ಸಿದ್ಧಪಡಿಸಿ ನಂತರ ಒಟ್ಟಾಗಿ ಕೂಡಿ ಬಿಲ್ಲಿನ ಹಣವನ್ನು ಪಡೆಯುವರು.

ದಿನಕ್ಕೆ ಹತ್ತಿಪ್ಪತ್ತಕ್ಕೂ ಹೆಚ್ಚು ಗುಂಪಿನ ಗ್ರಾಹಕರ ದರಪಟ್ಟಿಯನ್ನು ಕಾಗದದಲ್ಲಿ ಬರೆದು, ಹರಿದು ಎಸೆಯುವ ಬದಲು ಹಿಂದಿನ ಪಟ್ಟಿಯನ್ನು ಅಳಿಸಿ ಹೊಸದಾಗಿ ಬರೆಯಲು ಮರುಬಳಕೆಯಾಗುವ ಸ್ಲೇಟಿನ ಬರಹವು ಹೆಚ್ಚು ಅನುಕೂಲಕರ ಹಾಗೂ ಪರಿಸರ ಸ್ನೇಹಿ ಎನ್ನುತ್ತಾರೆ ಕ್ಯಾಷಿಯರ್.

■ ಎನ್. ಭರತ್ ಮಕ್ಕಿತ್ತಾಯ, ಮಧುಗಿರಿ

